## ಮೌಲ್ಯಾ

ಉದಯದ

'ರಥಸಪ್ತಮಿ'ಯ ಸಪ್ತಮಿ

■ ರಾಘವೇಂದ್ರ ಕೆ.

# 'ಎರಡು ದೋಣಿಯಲ್ಲಿ ಸಾಗಲು ಸಾಧ್ಯವಿಲ್ಲ

◆ **ಅಭಿನಯದ ಅಭಿರುಚಿ ಹುಟ್ಟಿದ್ದು ಹೇಗೆ?**

ನಟನೆಯನ್ನು ಎಲ್ಲೂ ಕಲಿತಿಲ್ಲ. ಅಭಿನಯ ಮಾಡುತ್ತೇನೆ ಎನ್ನುವ ಕಲ್ಪನೆ ಕೂಡ ಇರಲಿಲ್ಲ. ಒಂದು ವರ್ಷದಿಂದ ಇನ್‌ಸ್ಟಾಗ್ರಾಮ್‌ನಲ್ಲಿ ರೀಲ್ಸ್ ಮಾಡುತ್ತಿದ್ದೆ. ಅದನ್ನು ನಿರಂತರ ಮಾಡುತ್ತಿದ್ದವಳಿಗೆ ಸೀರಿಯಲ್‌ಗೆ ಆಡಿಷನ್ ಕೊಡುವ ಅಭಿಲಾಷೆ ಮೂಡಿತು. ಇನ್‌ಸ್ಟಾದಲ್ಲಿ ವೀಕ್ಷಕರು ಮತ್ತು ಫಾಲೋವರ್ಸ್ ಪ್ರಮಾಣ ಹೆಚ್ಚಿದ್ದರಿಂದ ಟೀವಿಗೆ ಬರುವ ಧೈರ್ಯವನ್ನು ಮಾಡಿದೆ. ಸಾಕಷ್ಟು ಆಡಿಷನ್ ನೀಡುತ್ತಿದ್ದವಳಿಗೆ ಇದರಲ್ಲಿ ಅವಕಾಶ ಸಿಕ್ಕಿತು. ಕಾಲೇಜು ದಿನಗಳ ನನ್ನ ರೀಲ್ಸ್‌ಗಳಿಗೆ ಹೆಚ್ಚು ಲೈಕ್ಸ್–ಷೇರ್ ಆದಾಗ ಖುಷಿ ಆಗುತ್ತಿತ್ತು.

◆ **ರೀಲ್ಸ್ ಮಾಡುವ ಕ್ರಿಯಾಶೀಲತೆ ರೂಢಿಸಿಕೊಂಡಿದ್ದು ಹೇಗೆ?**

ನೋಡುತ್ತಲೇ ಎಲ್ಲ ಕಲಿತದ್ದು. ಬೇರೆ ಯಾವುದಾದರೂ ರೀಲ್ಸ್ ನೋಡಿದರೆ ಅದರಲ್ಲಿ ಸುಧಾರಣೆ ಏನು ಮಾಡಿಕೊಳ್ಳಬೇಕು ಎಂದು ಯೋಚಿಸುತ್ತಿದ್ದೆ. ಈ ರೀತಿ ಮಾಡಿದರೆ ಕ್ಲಿಕ್ ಆಗುತ್ತದೆ ಎಂದು ಲೆಕ್ಕಾಚಾರ ಹಾಕಿ ಹೊಸ ಬಗೆಯಲ್ಲಿ ಯೋಚಿಸುತ್ತಿದ್ದೆ. ಎಷ್ಟೇ ಕೆಲಸ ಇದ್ದರೂ ರೀಲ್ಸ್ ಖುಷಿಯಿಂದ ಮಾಡುತ್ತಿದ್ದೆ. ಹೊರಸಂಚಾರ ಹೋದಾಗ ಒಳ್ಳೆಯ ಪ್ಲಾನ್ ಮಾಡಿ ರೀಲ್ಸ್ ರೂಪಿಸುತ್ತಿದ್ದೆ. ಆಯ್ಕೆ ಮಾಡಿ ನೋಡುತ್ತಿದ್ದ ರೀಲ್ಸ್‌ಗಳು ಹೊಸ ಚಿಂತನೆಯ ಬೀಜವನ್ನು ಮನಸಿನಲ್ಲಿ ಬಿತ್ತುತ್ತಿದ್ದವು. ಅದರ ಪ್ರೇರಣೆಯಿಂದ ಭಿನ್ನ ಬಗೆಯ ರೀಲ್ಸ್ ಮಾಡಲು ನನಗೆ ಸಾಧ್ಯ ಆಗುತ್ತಿತ್ತು.

◆ **ಮೊದಲ ದಿನ ಕ್ಯಾಮೆರಾ ಎದುರಿಸಿದ್ದ ಸನ್ನಿವೇಶ ಹೇಗಿತ್ತು?**

ಅವತ್ತು ತುಂಬ ನರ್ವಸ್ ಆಗಿದ್ದೆ. ಭೀತಿಯಿಂದಲೇ ಕ್ಯಾಮೆರಾ ಎದುರುಗೊಂಡಿದ್ದೆ. ಅದರಲ್ಲೂ ನಾಯಕಿಯ ಪಾತ್ರವನ್ನು ನಿರ್ವಹಿಸುತ್ತಿರುವುದು ಜವಾಬ್ದಾರಿ ಹೆಚ್ಚಿದೆ ಎಂದು ಅನ್ನಿಸುತ್ತಿತ್ತು. ನಿರ್ಮಾಣ ತಂಡವೇ ನನ್ನ ಮೇಲೆ ವಿಶ್ವಾಸವನ್ನು ಇಟ್ಟಿರುತ್ತದೆ ಎನ್ನುವುದು ಕಾಡುತ್ತಿತ್ತು. ಅದು ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿತ್ತು. ಮೊದಲ ದಿನದ ಆತಂಕ ಎರಡನೇ ದಿನಕ್ಕೆ ಕಡಿಮೆ ಆಯಿತು. ತಂಡದ ಸಹಕಾರ ನನ್ನಲ್ಲಿ ಮನೆಮಾಡಿದ್ದ ಭೀತಿಯನ್ನು ದೂರಮಾಡಿತು. ಚಿಕ್ಕ ಚಿಕ್ಕ ಸಂಗತಿಗಳನ್ನು ತಂಡವೇ ಕಲಿಸಿತು. ನಟನೆಯ ಕಲ್ಪನೆ ಇಲ್ಲದವಳಿಗೆ ಅಭಿನಯ ಕಲಿಸಿದ ಎಲ್ಲರಿಗೂ ಆಭಾರಿಯಾಗಿದ್ದೇನೆ.

◆ **ನಿಮ್ಮ ಪಾತ್ರದ ಮಹತ್ವ ಏನು?**

ಧಾರಾಳ ಮನಸ್ಸಿನ ಹುಡುಗಿ. ಎಲ್ಲರ ಕಷ್ಟಕ್ಕೂ ಸ್ಪಂದಿಸುವ ಕರುಣಾಮಯಿ. ಕುಟುಂಬದ ವಿಷಯದಲ್ಲಿ ತ್ಯಾಗಮಯಿ. ತಂದೆ ಎಂದರೆ ಪ್ರಾಣ. ಕುಟುಂಬಕ್ಕೆ ಏನೆಲ್ಲ ಮಾಡಲು ಸಿದ್ಧಳಿದ್ದಾಳೆ. ತಂಗಿ ಮತ್ತು ತಮ್ಮನ ಕ್ಷೇಮದ ವಿಷಯದಲ್ಲಿಯೂ ಯಾವುದೇ ರಾಜಿ ಇಲ್ಲ. ತುರ್ತು ಅಗತ್ಯಕ್ಕೆ ಹಣ ಇಲ್ಲದಿದ್ದರೂ ಕಷ್ಟದಿಂದ ಹೊಂದಿಸುತ್ತಾಳೆ. ಬಂಧುಗಳಲ್ಲದೆ ಬೇರೆಯವರ ಕಷ್ಟಕ್ಕೂ ಸಹಾಯ ಮಾಡುವ ಮನಸು ಅವಳಿಗೆ ಇದೆ. 'ರಥಸಪ್ತಮಿ'ಯ ಕಥೆ ಜುಗ್ಗತನ ಮತ್ತು ಧಾರಾಳ ಗುಣದ ಪರಾಕಾಷ್ಠೆಯನ್ನು ತೋರಿಸುತ್ತದೆ. ಹೆತ್ತವರ ಮೇಲಿನ ಮಮಕಾರವನ್ನು ಮಗಳು ಎಂದೂ ಬಿಟ್ಟುಕೊಡುವುದಿಲ್ಲ ಎನ್ನುವುದು ಇಲ್ಲಿಯ ಪ್ರಧಾನ ಅಂಶ.

◆ **ಎಂಜಿನಿಯರ್ ಆಗಲಿಲ್ಲ ಎಂಬ ಯೋಚನೆ ಯಾವತ್ತಾದರೂ ಕಾಡುತ್ತಾ?**

ಬಿಇ ಮುಗಿಸಿ ಕೆಲಸ ಮಾಡಬೇಕು ಎನ್ನುವ ಉದ್ದೇಶದಿಂದಲೇ ಓದಿದೆ. ಈ ಹವ್ಯಾಸ ಒಂದು ವರ್ಷದ ಮುಂಚೆ ಹುಟ್ಟಿತು. ಟೆಕ್ಕಿ ಕೆಲಸವೂ ಬೇರೆಯದೇ ಶಿಸ್ತನ್ನು ಬಯಸುತ್ತದೆ. ನಟಿ ಆಗದಿದ್ದರೆ ಖಂಡಿತ ಎಂಜಿನಿಯರ್ ಆಗಿರುತ್ತಿದ್ದೆ. ಹಾಗೆಂದು ಅದನ್ನು ತಪ್ಪಿಸಿಕೊಂಡಿದ್ದೇನೆ ಎಂದು ಯಾವತ್ತೂ ಅನ್ನಿಸಿಲ್ಲ.

◆ **ಮುಂದಿನ ಕನಸಿನ ಬಗ್ಗೆ ಏನು ಹೇಳುತ್ತೀರಿ?**

ಮೊದಲ ಸೀರಿಯಲ್ ಆಗಿರುವುದರಿಂದ ಎಲ್ಲರ ಬೆಂಬಲವನ್ನೂ ಬಯಸುತ್ತೇನೆ. ಮುಂದೆ ಸಿನಿಮಾದಲ್ಲಿ ನಟಿಸಬೇಕು. ಸದ್ಯ ನಟನೆಯನ್ನೇ ಪೂರ್ಣಾವಧಿ ಕೆಲಸ ಎಂದು ಯೋಚನೆ ಮಾಡಿದ್ದೇನೆ. ಈಗ ಬೇರೆ ಯಾವ ವಿಚಾರದ ಬಗ್ಗೆಯೂ ತಲೆಕೆಡಿಸಿಕೊಳ್ಳುವುದಿಲ್ಲ. ಎರಡು ದೋಣಿಯಲ್ಲಿ ಹೇಗೆ ಪಯಣ ಮಾಡಲು ಸಾಧ್ಯ ಇಲ್ಲವೋ, ಹಾಗೆಯೇ ಎರಡು ಕೆಲಸವನ್ನು ಮಾಡಲು ಆಗುವುದಿಲ್ಲ. ಒಂದೇ ಕೆಲಸದ ಮೇಲೆ ಸಂಪೂರ್ಣ ಗಮನವನ್ನು ಇಡಬೇಕು ಎನ್ನುವ ಸಂಕಲ್ಪ ಮಾಡಿರುವೆ. ■



ಹುಟ್ಟಿದ್ದು ಮೂಡಿಗೆರೆ, ಬೆಳೆದದ್ದು ಬೆಂಗಳೂರು. ಸೈಬರ್ ಸೆಕ್ಯೂರಿಟಿ ವಿಷಯದಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದೇನೆ. 'ರಥಸಪ್ತಮಿ' ಮೊದಲ ಪ್ರಯತ್ನ. ಅಪ್ಪ ಗಿರೀಶ್, ಕಂಪನಿಯೊಂದರಲ್ಲಿ ಮ್ಯಾನೇಜರ್ ಆಗಿದ್ದರು. ಆರೋಗ್ಯ ತೊಂದರೆಯಿಂದ ಕೆಲಸಕ್ಕೆ ಹೋಗುತ್ತಿಲ್ಲ. ತಾಯಿ ಶಾರದಾ ಅಕೌಂಟೆಂಟ್ ಆಗಿದ್ದಾರೆ. ನಾನೊಬ್ಬಳೇ ಮಗಳು. ಇಷ್ಟಪಟ್ಟು ನಟನೆಯನ್ನು ವೃತ್ತಿಯಾಗಿ ಆಯ್ಕೆ ಮಾಡಿಕೊಂಡಿದ್ದೇನೆ.